ವಿಜಯವಾಣಿ
ಕನ್ನಡಿಗರ ಧ್ವನಿ

# ಕ್ರಿಕೆಟ್: ಜೈನ್ ವಿವಿ ಚಾಂಪಿಯನ್

## ಅಖಿಲ ಭಾರತ ಕ್ರೀಡಾಕೂಟ: 5ರಲ್ಲಿ ಆತಿಥೇಯರಿಗೆ ಪ್ರಶಸ್ತಿ

**ಬೆಂಗಳೂರು:** ಜೈನ್ ವಿವಿ ತಂಡ ಭಾನುವಾರ ಸಮಾಪನಗೊಂಡ ಜೈನ್ ವಿಶ್ವವಿದ್ಯಾಲಯ ಅಖಿಲ ಭಾರತ ಕ್ರೀಡಾಕೂಟದ 5 ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ. ಕ್ರಿಕೆಟ್‌ನಲ್ಲಿ ಚಾಂಪಿಯನ್ ಆದ ಆತಿಥೇಯ ತಂಡ, ಮಹಿಳೆ ಮತ್ತು ಪುರುಷರ ಟೆನಿಸ್, ಮಹಿಳೆ ಮತ್ತು ಪುರುಷರ ಬ್ಯಾಡ್ಮಿಂಟನ್‌ನಲ್ಲೂ ಪ್ರಶಸ್ತಿ ಜಯಿಸಿದೆ. ಅಲ್ಲದೆ ಪುರುಷರ ಹಾಕಿ, ಪುರುಷರ ಮತ್ತು ಮಹಿಳೆಯರ ಈಜು ಸ್ಪರ್ಧೆಗಳಲ್ಲಿ ರನ್ನರ್ ಅಪ್ ಆಗಿದೆ.

### ಹಾಕಿ: ರನ್ನರ್ ಅಪ್

ಜೈನ್ ವಿವಿ ಮತ್ತು ಬೆಂಗಳೂರಿನ ಸುರಾನ ಕಾಲೇಜಿನ ನಡುವಿನ ಪುರುಷರ ಹಾಕಿ ಫೈನಲ್ ಪಂದ್ಯ ನಿಗದಿತ ಸಮಯದಲ್ಲಿ 1-1 ಗೋಲಿನಿಂದ ಡ್ರಾಗೊಂಡಿತ್ತು. ಬಳಿಕ ಪೆನಾಲ್ಟಿ ಶೂಟೌಟ್‌ನಲ್ಲಿ ಸುರಾನಾ ಕಾಲೇಜು 6-5ರಿಂದ ಜೈನ್ ವಿವಿಯನ್ನು ಮಣಿಸಿ ಚಾಂಪಿಯನ್ ಎನಿಸಿತು. ಜೈನ್ ವಿವಿಯ ಪ್ರದೀಪ್ ಮರಿಯಾ ಅತ್ಯುತ್ತಮ ಆಟಗಾರ ಪ್ರಶಸ್ತಿ ಪಡೆದರು.



ಕ್ರಿಕೆಟ್‌ನಲ್ಲಿ ಗೆದ್ದ ಜೈನ್ ವಿವಿ ತಂಡ.

**ಕ್ರಿಕೆಟ್ ಚಾಂಪಿಯನ್:** ಭಾನುವಾರ ನಡೆದ ಕ್ರಿಕೆಟ್ ಪಂದ್ಯದ ಫೈನಲ್‌ನಲ್ಲಿ ಸಮರ್ಥ್ ಆರ್ (10ಕ್ಕೆ 4 ಮತ್ತು 44* ರನ್) ಆಲ್ರೌಂಡ್ ಆಟ ಮತ್ತು ಶ್ರೇಯಸ್ ಗೋಪಾಲ್ (27ಕ್ಕೆ 4) ಪ್ರಭಾವಿ ಬೌಲಿಂಗ್ ದಾಳಿಯಿಂದ ಜೈನ್ ತಂಡ ಚೆನ್ನೈನ ಎಎಂ ಜೈನ್ ಕಾಲೇಜಿನ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಪಡೆದು, ಪ್ರಶಸ್ತಿ ಗೆದ್ದುಕೊಂಡಿತು. ಗಮನಾರ್ಹ ನಿರ್ವಹಣೆ ತೋರಿದ ಸಮರ್ಥ್ ಆರ್ ಅತ್ಯುತ್ತಮ ಆಟಗಾರ ಪ್ರಶಸ್ತಿಗೆ ಪಾತ್ರರಾದರು.

**ಎಎಂ ಜೈನ್: 37 ಓವರ್‌ಗಳಲ್ಲಿ 127** (ದಿನಕರನ್ 63*, ಸಮರ್ಥ್ ಆರ್ 10ಕ್ಕೆ 4, ಶ್ರೇಯಸ್ ಗೋಪಾಲ್ 27ಕ್ಕೆ 4), **ಜೈನ್ ವಿವಿ: 23 ಓವರ್‌ಗಳಲ್ಲಿ 2 ವಿಕೆಟ್‌ಗೆ 130** (ಸಮರ್ಥ್ ಆರ್ 44*, ಕೌನೇನ್ ಅಬ್ಬಾಸ್ 36*)